12. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ: ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನಲ್ಲಿ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ತಹಶೀಲ್ದಾರ್ ಕಛೇರಿಯ ಮುಂದೆ 05-12-2011 ರಿಂದ ಅನಿರ್ದಿಷ್ಟ ಅವಧಿ ಸತ್ಯಾಗ್ರಹ ಕುಳಿತಿರುವ ಬಗ್ಗೆ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಎದುರಿಸುತ್ತಿರತಕ್ಕ ಜ್ವಲಂತ ಸಮಸ್ಯೆಗಳನ್ನು ಕುರಿತು ಇಂಡಿ ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೋಸ್ಕರ ಅಲ್ಲಿನ ರೈತರು ಮತ್ತು ಸಾರ್ವಜನಿಕರು ಇಂಡಿ ಪಟ್ಟಣದ ತಹಶೀಲ್ದಾರ್ ಕಛೇರಿ ಎದುರಿಗೆ ದಿನಾಂಕ 05-12-2011 ರಿಂದ ಅನಿರ್ದಿಷ್ಟ ಅವಧಿಗೆ ಸತ್ಯಾಗ್ರಹಕ್ಕೆ ಕುಳಿತಿದ್ದಾರೆ. ಸರ್ಕಾರ ಈ ವಿಷಯದ ಬಗ್ಗೆ ಗಮನ ಹರಿಸದಿದ್ದಲ್ಲಿ ನಾಳೆಯಿಂದ ಅಮರಣಾಂತ ಉಪವಾಸ ಮತ್ತು ಉಗ್ರ ಹೋರಾಟವನ್ನು ಪ್ರಾರಂಭ ಮಾಡುತ್ತೇವೆ ಎನ್ನತಕ್ಕ ಹೇಳಿಕೆಗಳು ಈಗಾಗಲೇ ಪತ್ರಿಕೆಗಳೆಲ್ಲಾಲ್ಲಾ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಕಳೆದ 3-4 ದಿನಗಳ ಹಿಂದೆ ನಮ್ಮ ಬಿಜಾಪುರ ಜಿಲ್ಲೆಗೆ ಹೋಗಿದ್ದರು. ಆ ಸಂದರ್ಭದಲ್ಲಿ ಅವರಿಗೂ ಸಹ ಮನವಿ ಬಂದಿದೆ. ಇನ್ನೂವರೆಗೂ ಅಲ್ಲಿ ಸತ್ಯಾಗ್ರಹ ನಿಂತಿಲ್ಲ. ಇದರ ಬಗ್ಗೆ ಉಸ್ತುವಾರಿ ಸಚಿವರಾದಂತಹ ಮಾನ್ಯ ನಿರಾಣಿಯವರು ಫೋನ್‌ನಲ್ಲಿ ಮಾತನಾಡಿದ್ದಾರೆ. ಅಲ್ಲಿರತಕ್ಕಂತಹ ರೈತರು ಸರ್ಕಾರಕ್ಕೆ ಏನು ವಿನಂತಿ ಮಾಡಿದ್ದಾರೆ ಎಂದರೆ ಸರ್ಕಾರದ ವತಿಯಿಂದ ಮಾನ್ಯ ಉಸ್ತುವಾರಿ ಸಚಿವರು ಬರಲಿ. ಅವರೇನು ಫೋನ್‌ನಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ, ಆ ಮಾತನ್ನು ಅವರು ಬಂದು ರೈತರಿಗೆ ಹೇಳಿದರೆ ನಾವು ಸತ್ಯಾಗ್ರಹವನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ನನಗೂ ಕೂಡ ಹೇಳುತ್ತಿದ್ದಾರೆ. ದಯಮಾಡಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ಉಸ್ತುವಾರಿ ಸಚಿವರು ಇಲ್ಲ. ತಕ್ಷಣ ಅವರಿಗೆ ತಾವು ಆದೇಶ ಮಾಡಬೇಕು. ಸಂಬಂಧಪಟ್ಟ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ತಕ್ಷಣ ಅಲ್ಲಿಗೆ ಹೋಗಿ ಅಲ್ಲಿರತಕ್ಕಂತಹ ರೈತರನ್ನು ಸಮಾಧಾನ ಪಡಿಸಿ, ಸರ್ಕಾರದಿಂದ ಅವರಿಗೆ ಒಂದು ಅಶ್ವಾಸನೆ ಕೊಟ್ಟರೆ ಖಂಡಿತ ಅವರು ಚಳುವಳಿಯನ್ನು ವಾಪಸ್ ತೆಗೆದುಕೊಳ್ಳುತ್ತಾರೆ. ಅದಕ್ಕೆ ದಯಮಾಡಿ ಆ ಭಾಗದ, ಆ ಜಿಲ್ಲೆಯ ಒಬ್ಬ ಶಾಸಕನಾಗಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಸರ್ಕಾರ ಅದನ್ನು ಮಾಡಬೇಕು.

ಶ್ರೀ ಡಿ. ಬಿ. ಸದಾನಂದ ಗೌಡ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಉಸ್ತುವಾರಿ ಸಚಿವರೊಂದಿಗೆ ಚರ್ಚೆ ಮಾಡಿ ಮುಂದಿನ ಹೆಜ್ಜೆಗಳನ್ನು ತಿಳಿಸುತ್ತೇನೆ.

ಶ್ರೀ ಎ. ಎಸ್. ಪಾಟೀಲ್ (ನಡಹಳ್ಳಿ): ಉಸ್ತುವಾರಿ ಸಚಿವರಿಗೆ ತಾವು ಒಂದು ಮಾತು ಹೇಳಿದರೆ ಆಗುತ್ತದೆ.

ಶ್ರೀ ಡಿ. ಬಿ. ಸದಾನಂದ ಗೌಡ (ಮುಖ್ಯಮಂತ್ರಿಗಳು): ಉಸ್ತುವಾರಿ ಸಚಿವರೊಂದಿಗೆ ಅದನ್ನು ಚರ್ಚೆ ಮಾಡಿ ಏನೆಲ್ಲ ಅದಕ್ಕೆ ಮುಂದಿನ ಹೆಜ್ಜೆಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ತಿಳಿಸುತ್ತೇನೆ.

13. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಚರ್ಚೆ ಮತ್ತು ಸರ್ಕಾರದ ಉತ್ತರ

ವಿಷಯ: ರಾಜ್ಯದಲ್ಲಿ ರೈತರು ಬೆಳೆದ ಬೆಳೆಗಳಿಗೆ ಬೆಲೆ ಕುಸಿದಿರುವುದರಿಂದ ರೈತರು ಸಂಕಷ್ಟಕ್ಕೀಡಾಗಿರುವುದರಿಂದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸುವ ಬಗ್ಗೆ.

ಅಧ್ಯಕ್ಷರು: ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ ಮಾನ್ಯ ರೇವಣ್ಣನವರು, ವೆಂಕಟರಾವ್ ನಾಡಗೌಡ ಅವರುಗಳು ಪ್ರಾರಂಭ ಮಾಡಿ ಮುಗಿಸಬೇಕು. ಪ್ರಾರಂಭವಲ್ಲ, ಮುಗಿಸಬೇಕು.

ಶ್ರೀ ವೆಂಕಟರಾವ್ ನಾಡಗೌಡ: ನೀವು 69ರ ನಿಯಮದಲ್ಲೂ ಈಗಲೇ ಮುಗಿಸಿ ಬಿಡಬೇಕು ಎಂದರೆ ಹೇಗೆ? ಯಾರೂ ಮಾತನಾಡುವುದು ಬೇಡ ಅಂದರೆ ಬಿಟ್ಟು ಬಿಡುತ್ತೇವೆ. ಸರ್, 69ರ ಅಡಿಯಲ್ಲೂ ಯಾರೂ ಮಾತನಾಡಬಾರದು ಎಂದರೆ ಹೇಗೆ? ಇದು ನಮ್ಮ ಭಾಗದ ಬಹಳ ಸಮಸ್ಯೆ ಇರತಕ್ಕಂತಹ ಪ್ರಶ್ನೆ.

(ಗೊಂದಲ)

ಅಧ್ಯಕ್ಷರು: ನೀವು ಪ್ರಾರಂಭ ಮಾಡುತ್ತೀರೋ ಇಲ್ಲವೋ? ಅಷ್ಟೆ . . .

ಶ್ರೀ ವೆಂಕಟರಾವ್ ನಾಡಗೌಡ: ಪ್ರಾರಂಭ ಮಾಡಿ ಈಗಲೇ ಮುಗಿಸಬೇಕು ಎಂದರೆ ಹೇಗೆ?

ಅಧ್ಯಕ್ಷರು: ನೀವು ಪ್ರಾರಂಭ ಮಾಡಿ

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ನಮ್ಮ ಪ್ರದೇಶದಲ್ಲಿ ಭತ್ತ ಬೆಳೆಯತಕ್ಕಂತಹ ಎಲ್ಲರೂ ಮಾತನಾಡುತ್ತಾರೆ. ಇವತ್ತು ನಾವೆಲ್ಲ ಮಾತನಾಡುತ್ತೇವೆ. ರೈತ